ಕಳೆದ ೧೬ ವರ್ಷಗಳಿಂದಲೂ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಈ ವರ್ಷದಲ್ಲಾದರೂ ಕ್ರೀಡಾಂಗಣವನ್ನು ಕಟ್ಟಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಹಣವನ್ನು ಬರುವ ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಿ, ಕೆಲಸವನ್ನು ಪ್ರಾರಂಭ ಮಾಡಲಾಗುವುದು.

ಕೊಲ್ಲೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ಮಾಣ

೧೧೨೧. ಶ್ರೀ ಬಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡ ನಿರ್ಮಾಣ ಅತಿ ಅವಶ್ಯಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨ ಈ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಆರೋಗ್ಯ ಮಂತ್ರಿಗಳು ಕೊಲ್ಲೂರಿಗೆ ಬಂದಿದ್ದಾಗ ಆಶ್ವಾಸನೆ ನೀಡಿದ್ದು ನಿಜವಲ್ಲವೆ ?

೩ ಹಾಗಿದ್ದಲ್ಲಿ ೧೯೮೬-೮೭ನೇ ವರ್ಷದ ನಯವ್ಯಯದಲ್ಲಿ ಈ ಸಲುವಾಗಿ ಹಣ ಒದಗಿಸಿದ್ದರೂ ಹಾಗೂ ಮೂರು ಲಕ್ಷವನ್ನು ಕೊಲ್ಲೂರು ದೇವಸ್ಥಾನದವರೇ ಪಾವತಿ ಮಾಡಿದ್ದರೂ ಸರ್ಕಾರಿ ಆದೇಶ ಸಂಖ್ಯೆ ಆಕುಇ ೮೦ ಸಿಜಿಎಸ್ ೮೬ ದಿನಾಂಕ ೧೪-೧೦-೮೬ರ ಮೇರೆಗೆ ರದ್ದು ಗೊಳಿಸಲು ಕಾರಣವೇನು ?

೪ ಕಟ್ಟಡ ನಿರ್ಮಾಣದ ಬಗೆಗೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

೧ ಬಂದಿದೆ

೨ ನಿಜ

೩ ಈ ಕಾಮಗಾರಿಯ ಅಂದಾಜು ವೆಚ್ಚದ 1/3 ಭಾಗದಷ್ಟು ಹಣ ಇರಲಿಲ್ಲವಾದ್ದರಿಂದ ಅದನ್ನು ಈ ವರ್ಷ ತೆಗೆದ ಕೊಳ್ಳಲು ಸಾಧ್ಯವಾಗಲಿಲ್ಲ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದವರು ಪ್ರಸೂತಿ ಗೃಹ ಮಂಜೂರಾತಿಗಾಗಿ ೨.೦೦ ಲಕ್ಷ ರೂಪಾಯಿಗಳನ್ನು ದೇಣಿಗೆ ಕೊಟ್ಟಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ವೆಚ್ಚವನ್ನು ಸರ್ಕಾರವೇ ಭರಿಸುವುದು.

೪ ೧೯೮೭-೮೮ನೇ ಸಾಲಿನಲ್ಲಿ ಹಣದ ಲಭ್ಯತೆಯನ್ನು ಗಮನಿಸಿ ಪರಿಶೀಲಿಸಲಾಗುವುದು.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೆ, ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಅವಶ್ಯಕತೆ ಇದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು, ಸಾರ್ವಜನಿಕ ಕಾಮಗಾರಿ ಸಚಿವರೂ ಹಾಗೂ ಈ ಹಿಂದಿನ ಆರೋಗ್ಯ ಸಚಿವರು ವಾಗ್ದಾನ ಕೊಟ್ಟಿದ್ದು ನಿಜ ಎಂಬುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಹಾಗಿದ್ದರೆ ಕೊಟ್ಟಂತ ವಾಗ್ದಾನವನ್ನು ಈಡೇರಿಸಬೇಕಾದದ್ದು ನಿಜವಲ್ಲವೇ? ವಾಗ್ದಾನ ಕೊಟ್ಟ ಮೇಲೆ, ಕೊಲ್ಲೂರು ಅಲ್ಲದೆ, ಇನ್ನೂ ೩-೪ ಆಸ್ಪತ್ರೆಗಳಿಗೆ ಬೇಕಾದಷ್ಟು ಹಣವನ್ನು ಒದಗಿಸಲಾಗಿದ್ದು, ಅದನ್ನು ೧೪-೧೦-೮೬ರಲ್ಲಿ ಬದಲಾಯಿಸಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ? ಕೊಲ್ಲೂರು ಆಸ್ಪತ್ರೆಗೆ ಮೂರನೇ ಒಂದಂಶದಷ್ಟು ಹಣ ಲಭ್ಯವಾಗಿರಲಿಲ್ಲವೇ?

MR. SPEAKER.— The work will be taken up during 1987-88 depending upon the availability of the funds ಎಂದು ಹೇಳಿದ್ದಾರೆ. ಆದ್ದರಿಂದ ಯಾವಾಗ ಫಂಡ್ಸ್ ಅವೈಲಬಿಲಿಟಿ ಮಾಡುತ್ತೀರಿ ಎಂದು ಕೇಳಿ.

SRI G.S. ACHAR.— Depends upon the availability of the funds ಪ್ರಶ್ನೆ ಅಲ್ಲಿ last year fundswere provided and it was diverted ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದ ಸಂದರ್ಭದಲ್ಲಿ ವಾಗ್ದಾನ ಕೊಟ್ಟಿದ್ದಾರೆ. ಆದ್ದರಿಂದ, ಈ ರೀತಿ ಆಗಬಾರದೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.— ವಾಗ್ದಾನ ಕೊಟ್ಟಿರುವುದು ನಿಜ ಎಂದು ಮೊದಲೇ ನಾನು ಒಪ್ಪಿ ಕೊಂಡಿದ್ದೇನೆ. ತಾಂತ್ರಿಕವಾಗಿ ಆಕ್ಷೇಪಣೆ ಬಂದಿದ್ದರಿಂದ, ಮೂರನೇ ಒಂದು ಭಾಗಕ್ಕಿಂತಲೂ ಕಡಿಮೆ ಹಣವನ್ನು ಕಾಮಗಾರಿಗಾಗಿ ಇಟ್ಟಿದ್ದರಿಂದ ಅದನ್ನು ಮಂಜೂರು ಮಾಡುವುದಕ್ಕೆ ಅಡಚಣೆಯಾಗಿದೆ. ಈ ಸಾಲಿನಲ್ಲಿ ಕೆಲಸ ಮಾಡಬಹುದು.

ಶ್ರೀ ಜಿ.ಎಸ್. ಆಚಾರ್.— ಮೂರನೇ ಒಂದು ಭಾಗದಷ್ಟೇ ಆಗಲಿ, ಆ ರೀತಿ ಇಟ್ಟಿದ್ದ ಹಣವನ್ನು ಏತಕ್ಕೆ ಮೂರು ಕಡೆ ಬೇರೆ ಬೇರೆ ಆಸ್ಪತ್ರೆಗಳಿಗೆ ಹೇಗೆ ಕೊಟ್ಟರು...

ಶ್ರೀ ಹೆಚ್.ಎಲ್. ತಿಮ್ಮೇಗೌಡ.— ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದವರು ಪ್ರಸೂತಿ ಗೃಹ ಮತ್ತು ಜನರಲ್ ಆಸ್ಪತ್ರೆ ಅಭಿವೃದ್ಧಿಗೋಸ್ಕರ ಪೈಮರಿ ಹೆಲ್ತ್ ಸೆಂಟರ್ ಕೊಡಬೆ ಕೆಂದು ಮಾನ್ಯ ಮುಖ್ಯ ಮಂತ್ರಿಗಳು ಕೊಲ್ಲೂರಿಗೆ ಬಂದಿದ್ದಾಗ ಕೇಳಿದ್ದಕ್ಕೆ ಆದರ ಬಗ್ಗೆ ಆಶ್ವಾಸನೆಯನ್ನು ಕೊಟ್ಟಿದ್ದರು. ಮೊದಲೇ ಅವರು ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ, ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ಕೊಡುವವರಂತೆ ಇದ್ದಾರೆ, ಸರ್ಕಾರದ ನೀತಿ ಏನು ಬಿರಿಯವರು ಎಷ್ಟು ದುಡ್ಡು ಕೊಡುತ್ತಾರೆ. ಆದರಲ್ಲಿಯೇ ಕೆಲಸಪ್ರಾರಂಭ ಮಾಡಬಹುದು ಇವೊತ್ತು ಪೆಂಡಿಂಗ್ ಆಫಾನ್ ದಿ ಅವೈಲಿಬಿಲಿಟಿ ಆಫ್ ಫಂಡ್ಸ್ ಎಂದು ಇಲ್ಲಿ ಹೇಳಿದ್ದೀರಿ ಇವೊತ್ತು ಅವರು ಎರಡು ಲಕ್ಷ ರೂಪಾಯಿ ಕೊಟ್ಟಿರುವುದನ್ನು ಬೇರೆ ಕಡೆಗೆ ಖರ್ಚು ಮಾಡಿಕೊಳ್ಳುವುದು ಸರಿಯಲ್ಲ. ಅವರು ಕೊಟ್ಟ ರತಕ್ಕ ಎರಡು ಲಕ್ಷ ರೂಪಾಯಿ ಜೊತೆಗೆ ಮತ್ತೆ ಒಂದು ಲಕ್ಷ ರೂಪಾಯಿ ಕೊಡಲಿಕ್ಕೆ ತಯಾರಿದ್ದಾರೆ. ಆದ್ದರಿಂದ, ಈ ಹೆರಿಗೆ ಆಸ್ಪತ್ರೆ ಮತ್ತು ಜನರಲ್ ಆಸ್ಪತ್ರೆ ಆರಂಭ ಮಾಡತಕ್ಕ ಆಶ್ವಾಸನೆಯನ್ನು ಕೊಡಬೇಕು. ಈಗ ಕೊಟ್ಟಿರತಕ್ಕ ಹಣವನ್ನು ಖರ್ಚುಮಾಡಿ ರೆಸಿಡೆಂಟಿಯಲ್ಲಿ ಈ ಕೆಲಸ ಮಾಡಬಹುದು. ಆದ್ದರಿಂದ ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತೆನೆಯೇ?

ಶ್ರೀ ಹೆಚ್.ಟಿ. ಕೃಷ್ಣಪ್ಪ — ಮಾನ್ಯ ಸದಸ್ಯರ ಸಲಹೆಯನ್ನು ಒಪ್ಪಿದ್ದೇನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾವುದೇ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗದಿದ್ದರೆ ಮೂರನೇ ಒಂದು ಭಾಗ ಬಡ್ಜೆಟ್ ಪ್ರಾವಿಜನ್ ಇದ್ದರೆ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಇದೇ ಸದನದಲ್ಲಿ ಮಾನ್ಯ ದೇವೇಗೌಡರು ತಮ್ಮ ಬಡ್ಜೆಟ್ ಭಾಷಣ ಮಾಡುವಾಗ ಯಾವುದೇ ಕಾಮಗಾರಿಗಳಿಗೆ ಮೂರನೇ ಒಂದು ಭಾಗ ಬಡ್ಜೆಟ್ ಪ್ರಾವಿಜನ್ ಮಾಡಿದ ಆ ಕೆಲಸ ನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ ಎಂದು ಕೇಳಿದಾಗ ಅದಕ್ಕೆ ಅವರು ಎಂದರೆ ಅಂತಹ ಫಂಡ್ ನೆಸೆಸಿಟಿ ಇಲ್ಲ, ಅದರ ಬಗ್ಗೆ ಮುಖ್ಯಮಂತ್ರಿಗಳ ಜೊತೆಮಾತನಾಡಿದ್ದೇನೆ less than 1/3rd provision ಇದ್ದರೂ ಅಂತಹ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಇದೇ ಸದನದಲ್ಲಿ ಅವರು ಹೇಳಿದ್ದಾರೆ ಆದರೂ ಇಲ್ಲಿ ಈ ಡಿಫಿಕಲ್ಟಿ ಏತಕ್ಕೆ ಬಂತು?

ಶ್ರೀ ರಾಮಕೃಷ್ಣ ಹೆಗಡೆ.— ಈ ಡಿಫಿಕಲ್ಟಿ ಬಂದಿದ್ದಕ್ಕೆ ಎರಡು ಕಾರಣಗಳು. ಒಂದು ಕಾರಣ ಅಂದರೆ, ಹಣಕಾಸಿನ ಅನುಕೂಲತೆ ಎಷ್ಟು ನಿರೀಕ್ಷೆ ಮಾಡಿದ್ದೆವು ಅಷ್ಟು ಆಗಲಿಲ್ಲ. ಮತ್ತೊಂದು ಪ್ಲಾನಿಂಗ್ ಕಮಿಷನ್‌ರವರು ಟೋಕನ್ ಗ್ರಾಂಟ್ ಬಡ್ಜೆಟ್ಟಿನಲ್ಲಿ ಹಾಕಿರತಕ್ಕಂತಹ ಖರ್ಚು ಮಾಡಲಿಕ್ಕೆ ಸಾಕಷ್ಟು ಪ್ರಾವಿಜನ್ ಇರುವುದಿಲ್ಲ. ಆದ್ದರಿಂದ ಈ ಪದ್ಧತಿಯನ್ನು ಕೈ ಬಿಡಬೇಕೆಂದು ಸಲಹೆ ಮಾಡಿದ್ದಾರೆ.

ಅಧ್ಯಕ್ಷರು.— ಮುಂದಿನ ಪ್ರಶ್ನೆ ೮೭೯, ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಸಮಯ ಬೇಕೆಂದು ಕೇಳಿದ್ದಾರೆ.

ಶ್ರೀ ಜಿ.ಎಸ್. ಆಚಾರ್.— ಕೊಲ್ಲೂರು ಆಸ್ಪತ್ರೆಯ ಬಗ್ಗೆ ಆಗುತ್ತದೆಯೋ ಇಲ್ಲವೋ ಹೇಳಲಿ.....

ಅಧ್ಯಕ್ಷರು.— ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಉತ್ತರ ಹೇಳಿದ್ದಾರೆ. ದಯವಿಟ್ಟು ತಾವು ಕುಳಿತುಕೊಳ್ಳಿ, ಈಗ ಮತ್ತೆ ತಾವು ಏನಾದರೂ ಹೇಳಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ. ವಸಂತ ಬಂಗೇರ.— ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಯಾವಾಗ ಉತ್ತರ ಸಿಕ್ಕುತ್ತದೆ.

ಅಧ್ಯಕ್ಷರು.— ಆದಷ್ಟು ಬೇಗ ತರಿಸುತ್ತೇನೆ, ದಯವಿಟ್ಟು ತಾವು ಕುಳಿತುಕೊಳ್ಳಿ.